# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1123
2 ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ ( ಶಿಕ್ಷಕರ ಕ್ಷೇತ್ರ)
3 ಉತ್ತರಿಸುವ ದಿನಾಂಕ : 12.03.2026
4 ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಪೊಲೀಸ್ ಇಲಾಖೆಯ ನೇಮಕಾತಿ ಅಧಿಸೂಚನೆ ಸಂಖ್ಯೆ:10/ನೇಮಕಾತಿ-4/ಡಿಐಜಿಪಿ /2011-12 ದಿ:09.01.2012ರ ಪಿಸಿ (ಐಆರ್‌ಬಿ)-750ರ ನೇಮಕಾತಿಗೆ ಸಂಬಂಧಿಸಿದಂತೆ ಹೆಚ್ಚುವರಿಯಾಗಿ ಉಳಿದಿರುವ 28 ಅಭ್ಯರ್ಥಿಗಳಿಗೆ ಇದುವರೆಗೂ ನೇಮಕಾತಿ ಆದೇಶ ಪ್ರತಿ ನೀಡದೇ ಇರಲು ಕಾರಣವೇನು; | ಭಾರತೀಯ ಮೀಸಲು ಪಡೆಯ 750 ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳನ್ನು ಭರ್ತಿಮಾಡಲು ಸಂಖ್ಯೆ:10/ನೇಮಕಾತಿ-4/ಡಿಐಜಿಪಿ /2011-12 ದಿ: 09.01.2012ರ ಅನುಸಾರ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ.<br><br>ಕ.ರಾ.ಮೀ.ಪೊ. (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 2009 ರನ್ವಯ ಒಂದು ತಾತ್ಕಾಲಿಕ ಆಯ್ಕೆಪಟ್ಟಿಗೆ ಮಾತ್ರ ಅವಕಾಶವಿದ್ದು, ಮೇಲ್ಕಂಡ ನೇಮಕಾತಿ ಅಧಿಸೂಚನೆಗೆ ಸಂಬಂಧಿಸಿದಂತೆ ಎಡಿಜಿಪಿ, ಕೆಎಸ್‌ಆರ್‌ಪಿ ರವರ ದಿ:03.01.2014ರ ಅಂತಿಮ ಆಯ್ಕೆ ಪಟ್ಟಿಯಲ್ಲಿ ಅರ್ಹತೆ ಅನುಸಾರ ಸ್ಥಾನ ಪಡೆದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಲಾಗಿರುತ್ತದೆ. ತದನಂತರದಲ್ಲಿ ಕರ್ತವ್ಯಕ್ಕೆ ವರದಿ ಮಾಡದೇ ಬಾಕಿ ಉಳಿದ ರಿಕ್ತ ಸ್ಥಾನವನ್ನು 2016, 2017, 2018 ಹಾಗೂ 2019ನೇ ಸಾಲಿನ ನೇಮಕಾತಿಯಲ್ಲಿ ಭರ್ತಿಮಾಡಲಾಗಿರುತ್ತದೆ. |
| ಆ) | ದಿನಾಂಕ:23.02.2024 ರಂದು ಸದನದಲ್ಲಿ ಮಾನ್ಯ ಸಚಿವರು ಈ 28 ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವುದು ನಿಜವಾಗಿದ್ದು, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸಚಿವ ಸಂಪುಟದ ಮುಂದೆ ತಂದು ಈ ಎಲ್ಲಾ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಕ್ರಮ ಕೈಗೊಳ್ಳುತ್ತೇನೆ ಎಂದು ತಿಳಿಸಿದ್ದರೂ ಕೂಡ ಇಲ್ಲಿಯವರೆಗೂ ನೇಮಕಾತಿ ಆದೇಶ ನೀಡದೆ ಇರಲು ಕಾರಣವೇನು; | |
| ಇ) | ಸರ್ಕಾರವು ಈ ವಿಷಯದನ್ವಯ ವಿಳಂಬ ಮಾಡದ ಯಾವ ಕಾಲಮಿತಿಯಲ್ಲಿ ಈ 28 ಅಭ್ಯರ್ಥಿಗಳಿಗೆ ಆದೇಶ ಪ್ರತಿಯನ್ನು ನೀಡಲಾಗುತ್ತದೆ? (ಸ್ಪಷ್ಟತೆಯನ್ನು ನೀಡುವುದು) | ನೇಮಕಾತಿ ಪ್ರಕ್ರಿಯೆಯಲ್ಲಿ ಬಾಕಿ ಉಳಿದಿರುವ ಅಭ್ಯರ್ಥಿಗಳಿಗೆ ಅಂತಿಮ ಅವಕಾಶವನ್ನು ನೀಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಡಿಜಿ & ಐಜಿಪಿ ರವರಿಗೆ ಸೂಚಿಸಲಾಗಿದ್ದು, ಇವರಿಗೆ ನೇಮಕಾತಿ ಆದೇಶ ನೀಡುವ ಕುರಿತಂತೆ ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿದೆ. |

ಹೆಚ್ ಡಿ 58 ಪಿಎಸ್ 2026

(ಡಾ|| ಜಿ. ಪರಮೇಶ್ವರ)
ಗೃಹ ಸಚಿವರು